11. ಇ-ಆಡಳಿತ

12. ವಿಚಾರಣಾ ಪ್ರಕರಣಗಳ ವಿಲೇ ಮಾಡಲು ಸಮಯ ನಿಗದಿಗೊಳಿಸುವ ಮತ್ತು ಶಿಕ್ಷೆ ವಿಧಿಸುವ ವಿಧಾನ ರೂಪಿಸಲಾಗಿದೆ. ಇದಲ್ಲದೆ ಸರ್ಕಾರವು ಆಡಳಿತ ಸುಧಾರಣೆ ಕುರಿತಂತೆ 2001-02ರಿಂದ ವಾರ್ಷಿಕವಾಗಿ ಆಡಳಿತ ಕಾರ್ಯತಂತ್ರ ಮತ್ತು ಕ್ರಿಯಾಯೋಜನೆಯನ್ನು ಹಮ್ಮಿಕೊಂಡು ಆಡಳಿತ ಸುಧಾರಣೆ ಪ್ರಕ್ರಿಯೆಯನ್ನು ಮುಂದುವರಿಸಾಲಾಗುತ್ತಿದೆ. 2002-03 ಕರ್ನಾಟಕದಲ್ಲಿ ಆಡಳಿತ ಕಾರ್ಯತಂತ್ರ ಮತ್ತು ಕ್ರಿಯಾಯೋಜನೆ ಪ್ರಕಟಿಸಲಾಗಿದೆ. ಇದರಲ್ಲಿ 2001-02ರಲ್ಲಿ ಸಾಧಿಸಲಾದ ಪ್ರಗತಿಯ ಪಟ್ಟಿ ಹಾಗೂ 2002-03ರಲ್ಲಿ ಅನುಷ್ಠಾನಗೊಳಿಸುವ ವಿಷಯಗಳ ಯೋಜನೆಯನ್ನು ನಿಗಧಿಪಡಿಸಲಾಗಿದೆ.

ಕಡೂರು ತಾಲ್ಲೂಕಿನ ಆರಕ್ಷಕ ಠಾಣೆಗಳು

148(186) ಶ್ರೀ ಕೃಷ್ಣಮೂರ್ತಿ ಕೆ.ಎಂ(ಕಡೂರು) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಡೂರು ತಾಲ್ಲೂಕಿನಲ್ಲಿ ಎಷ್ಟು ಆರಕ್ಷಕ ಠಾಣೆಗಳು ಹಾಗೂ ಆರಕ್ಷಕ ವೃತ್ತಗಳಿವೆ;

ಆ. ಕಡೂರು ಪಟ್ಟಣಕ್ಕೆ ಟ್ರಾಫಿಕ್ ಆರಕ್ಷಕ ಠಾಣೆ ಅಥವಾ ಗ್ರಾಮಾಂತರೆ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾಪನೆ ಸರ್ಕಾರದ ಮುಂದಿದೆಯೇ;

ಇ. ಹಾಗಿದ್ದಲ್ಲಿ, ಕಡೂರು ಆರಕ್ಷಕ ಠಾಣೆಯನ್ನು ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ;

ಈ. ಕಡೂರು ತಾಲ್ಲೂಕಿನಲ್ಲಿ ಪೊಲೀಸ್ ಉಪ ವಿಭಾಗ ಮಂಜೂರು ಮಾಡಲು ಸರ್ಕಾರ ಮುಂದೆ ಪ್ರಸ್ತಾವನೆ ಇದೆಯೇ ಇದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುತ್ತದೆ?

ಶ್ರೀ. ಮಲ್ಲಿಕಾರ್ಜುನ ಖರ್ಗೆ(ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. ಕಡೂರು ತಾಲ್ಲೂಕಿನಲ್ಲಿ 6 ಆರಕ್ಷಕ ಠಾಣೆಗಳು ಹಾಗೂ 2 ಆರಕ್ಷಕ ವೃತ್ತ ಕಛೇರಿಗಳಿವೆ.

ಆ. ಕಡೂರು ಪಟ್ಟಣಕ್ಕೆ ಸಂಚಾರಿ ಪೊಲೀಸ್ ಠಾಣೆ ಅಥವಾ ಗ್ರಾಮಾಂತರ ಪೊಲೀಸ್ ಠಾಣೆ ಪ್ರಾರಂಭಿಸಲು ಸಮರ್ಥನೆ ಇರುವುದಿಲ್ಲ.

ಇ. ಇಲ್ಲ

ಈ. ಇಲ್ಲ

ಕಡೂರು ಕ್ಷೇತ್ರದ ಹಿರೇನಲ್ಲೂರು ಹೋಬಳಿಯ ವ್ಯಾಪ್ತಿಯಲ್ಲಿ ಪ್ರತ್ಯೇಕ ಆರಕ್ಷಕ ಠಾಣೆ ಮಂಜೂರಾತಿ

149(187) ಶ್ರೀ ಕೃಷ್ಣಮೂರ್ತಿ ಕೆ.ಎಂ(ಕಡೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹಿರೇನಲ್ಲೂರು ಹೋಬಳಿಯ ವ್ಯಾಪ್ತಿಯಲ್ಲಿರುವ ಗ್ರಾಮಗಳ ಸಂಖ್ಯೆ ಎಷ್ಟು. ಹಾಗೂ ಅವುಗಳಲ್ಲಿ ಎಷ್ಟು ಆರಕ್ಷಕ ಠಾಣೆಗಳ ವ್ಯಾಪ್ತಿಗೆ ಒಳಪಡುತ್ತವೆ.

ಆ. ಹಾಗಿದ್ದಲ್ಲಿ, ಹಿರೇನಲ್ಲೂರಿನ ಹೋಬಳಿಯ ಗ್ರಾಮಸ್ಥರು ಯಾಗಚಿಚೀರೂರು- ಅಜ್ಜಂಪುರ ಪೊಲೀಸ್ ಠಾಣೆಗಳಿಗೆ ಸಣ್ಣಪುಟ್ಟ ಕೆಲಸಗಳಿಗೆ ಅಲೆಯುತ್ತಿರುವುದು ಸರ್ಕಾರದ ಗಮನಕ್ಕೆ